ಮಾರಲಾಗುವ ಬಿರಟೆಗಳು, ಮಧ್ಯಾಹ್ನದ ಬಿಸಿಲಿಗೆ ಇರಲಿ ಎಂದು ಮತ್ತೊಂದು ಬಗೆಯ ಟೊಪ್ಪಿ, ಅಬ್ಬಾ.... ಒಟ್ಟಿನಲ್ಲಿ ಅವರ ಸಿದ್ಧತೆ ನೋಡಿದರೆ, ಪರಲೋಕ ಯಾತ್ರೆಗೇ ಹೊರಟಂತಿತ್ತು. ಮತ್ತೊಬ್ಬರು ಹೆಂಡತಿ ಮಕ್ಕಳ ಸಮೇತರಾಗಿ ಬಂದಿದ್ದಾರೆ. ಮತ್ತೊಬ್ಬರ ಮೂರು ತಲೆಮಾರು ಶಾಲಾ ಆವರಣದಲ್ಲಿ ನೆರೆದಿದೆ. ಇನ್ನೊಬ್ಬರಿಗೆ ಪಾಪ ಪ್ಲಾನಿಂಗೂ ಇಲ್ಲ, ಫ್ಯಾಮಿಲಿ ಪ್ಲಾನಿಂಗೂ ಇಲ್ಲ. ಮೂರು ವರ್ಷದಲ್ಲಿ ನಾಲ್ಕು ಮಾಡಲ್ಲುಗಳನ್ನು ತಯಾರಿಸಿ, ಎಲ್ಲವನ್ನೂ ಇಲ್ಲಿಗೆ ಕರೆತಂದು ಪ್ರದರ್ಶನ ನೀಡುತ್ತಿದ್ದಾರೆ. ದೊಡ್ಡದಕ್ಕೆ ಅರ್ಜಿ ಬೇಕು. ಮತ್ತೊಂದು ಚಿಲ್ಟಾರಿ, ಅಪ್ಪನ ಕೈಲಿದೆ. ಇನ್ನೆರಡು ಅವಳಿಗಳು, ಅಮ್ಮನ ಬಳಿ ಹಾಲಿಗಾಗಿ ಹೋರಾಟ ಮಾಡುವ ಹಂತ ತಲುಪಿವೆ. ಅಷ್ಟು ಜನರ ಮುಂದೆ ಹೇಗೆ... ಕಷ್ಟ ಕಷ್ಟ.

ಇವೆಲ್ಲದರ ಮಧ್ಯೆ. ಠಾಕು ಠೀಕಾಗಿ ಬಂದಿರುವನೊಬ್ಬ -ಬಹುರಾಷ್ಟ್ರೀಯ ಕಂಪನಿಯೊಂದರ ಮ್ಯಾನೇಜರನೇ ಇದ್ದಿರಬೇಕು, ಪ್ರಸನ್ನ ಮುಖ ಮುದ್ರೆ ಧರಿಸಿದ್ದರೂ, ಮನಸ್ಸಿನೊಳಗಿನ ಅಸಹನೆ ಇಣುಕುತ್ತಿದೆ. ಇತರರೆಡೆಗಿನ ತಿರಸ್ಕಾರ ಇಣುಕುತ್ತಿದೆ. ಮಾತು ಮಾತಿಗೂ, ಮೊಬೈಲುಗಳನ್ನು ನೋಡಿಕೊಳ್ಳುತ್ತಿದ್ದಾನೆ. ಬೆಲ್ಟಿಗೇ ಸಿಕ್ಕಿಸಿಕೊಂಡಿರುವ ಕಂಪನಿಯ ಬ್ಯಾಡ್ಜಿಗೆ, ಎರಡು ಥಂಬ್ ಡ್ರೈವುಗಳನ್ನು ಕಟ್ಟಿಕೊಂಡಿದ್ದಾನೆ. ಈ ಬಾರಿ ಬೆಲ್ಟಿಗೆ ಬಿಗಿದುಕೊಂಡಿರುವ ಎರಡು ದುಬಾರಿ ಮೊಬೈಲುಗಳನ್ನು ಬಿಟ್ಟು, ಮೂರನೇ ಮೊಬೈಲನ್ನು ತೆಗೆದು, ಏನೋ ನೋಡಿಕೊಂಡು, ಮತ್ತೆ ಮೊಬೈಲನ್ನು ಪ್ಯಾಂಟಿನ ಜೇಬಿನೊಳಗೇ ಇಳಿ ಬಿಟ್ಟ. ಇವನೇನು ಮನುಷ್ಯನೋ, ಮೊಬೈಲ್ ಷೋರೂಮೋ ಎಂದು ಅಚ್ಚರಿಯಾಯಿತು.

ಅಷ್ಟರಲ್ಲಿ ಮತ್ತೇ ಕದಲಿಕೆ. ಹೆರಿಗೆ ನೋವು ಬರುವಂತೆ, ಪ್ರತಿ ಹತ್ತೋ, ಹದಿನೈದೋ ನಿಮಿಷಕ್ಕೊಮ್ಮೆ ನಿಯಮಿತವಾಗಿ ಚಟುವಟಿಕೆ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ಅರ್ಜಿ ಕೊಡಲು ಆರಂಭಿಸಿದರೇನೋ ಎಂದು ಕ್ಷಣ ಭ್ರಾಂತಿ ಮೂಡಬೇಕು. ಆದರೆ, ಬರೀ ಲೈನ್ ಅಡ್ಜಸ್ಟ್ ಮೆಂಟ್ ಅಷ್ಟೇಯಾ…

ಇಷ್ಟೆಲ್ಲಾ ನಡೆಯುವ ವೇಳೆಗೆ, ಶಾಲೆಯಲ್ಲಿ ಮೊದಲ ಚಟುವಟಿಕೆ ಆರಂಭವಾಗಿತ್ತು. ಕೆಲ ಮಹಿಳೆಯರು ಬಂದು, ಶಾಲೆಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದರು. ಆವರಣದಲ್ಲಿದ್ದ ಒಂಚೂರು ಓಪನ್ ಸ್ಪೇಸೇ ಮಕ್ಕಳಿಗೆ ಆಟದ ಬಯಲಾಗಿ ಬಳಕೆಯಾಗಿತ್ತು. ಅದೇ ತೋಟ ಕೂಡಾ... ಅಲ್ಲಿದ್ದ ಕೆಲವೇ ಕೆಲವು ಮರಗಳಿಗೆ ವೈಜ್ಞಾನಿಕ ನಾಮ, ಬಳಕೆಯಲ್ಲಿರುವ ಹೆಸರುಗಳು ಇತ್ಯಾದಿ ವಿವರಗಳನ್ನು ಬರೆದು ನೇತು ಹಾಕಿ, ಆ ಬಯಲನ್ನೇ, ಬಟಾನಿಕಲ್ ಗಾರ್ಡನ್ನಾಗಿಯೂ ಬಳಸಲಾಗಿತ್ತು. ಕ್ಯಾಶುರೀನಾ, ನಾಗದಾಳೆ, ಮಳೆ ಮರ ಇತ್ಯಾದಿ ಮರಗಳ ಹೂಗಳು ಬಿದ್ದು, ರಾತ್ರಿಯೆಲ್ಲಾ ಸಿಂಗಾರಗೊಂಡಿದ್ದ ಬಯಲನ್ನು ಮಹಿಳೆಯರು ಗುಡಿಸಿ ಬಿಟ್ಟರು. ಆಗ ತೋಟದ ನಿರ್ವಹಣೆ ಕುರಿತ ಝೆನ್ ಕತೆ ನೆನಪಾಯಿತು.

ಕಸ ಗುಡಿಸುವ ಕೆಲಸ ಮುಗಿಯುವ ಮುನ್ನವೇ, ಒಂದಷ್ಟು ದೊಡ್ಡ ಮಕ್ಕಳು ಬಂದರು. ಎಂಟೋ, ಒಂಬತ್ತನೆಯ ತರಗತಿಯಲ್ಲಿರಬೇಕು. ಒಂಬತ್ತು ಗಂಟೆ ಶಾಲೆಗೆ, ಏಳೂವರೆಗೆ ಬಂದಿದ್ದರಲ್ಲಾ ಎಂದು ಸೋಜಿಗವಾಯಿತು. ಸ್ಪೆಷಲ್ ಕ್ಲಾಸ್ ಇರಬಹುದಾ ಎಂಬ ಶಂಕೆಯೂ ಮೂಡಿತು. ಆದರೆ, ಆ ಮಕ್ಕಳು ಬಂದವರೇ, ಸೀದಾ ವೇದಿಕೆಯ ಮೇಲೆ ಹೋಗಿ, ಮೂರನೇ ದರ್ಜೆಯ ಬಾಲಿವುಡ್ ಡಾನ್ಸ್ ಶುರು ಮಾಡಿದವು. ಬಾಲಿವುಡ್‌ನ ಎಲ್ಲ ಆಂಗಿಕ, ಅಭಿನಯವನ್ನು ಯಾವುದೇ ಮುಜುಗರವಿಲ್ಲದೇ ತಾಲೀಮಿನಲ್ಲಿ ತೋರಿಸಿದವು. ಮುಂದಿನ ತಾಸೊಪ್ಪತ್ತು ಕುಣಿದೇ ಕುಣಿದವು. ಪಾಪ ಮನೆಯಲ್ಲಿ ತಂದೆ ತಾಯಂದಿರಿಗೆ ಯಾವ್ಯಾವ ಸ್ಪೆಷಲ್ ಕ್ಲಾಸುಗಳು ಎಂದು ಹೇಳಿ ಬಂದಿದ್ದರೋ... ಲಕ್ಷಗಟ್ಟಲೇ ವಂತಿಗೆ ಕಟ್ಟಿ ಬರುವ ಈ ಮಕ್ಕಳಿಗೂ, ಹಳ್ಳಿಗಳ ಸರ್ಕಾರಿ ಶಾಲೆಯ ಮಕ್ಕಳಿಗೂ ವ್ಯತ್ಯಾಸವೇ ಕಾಣಲಿಲ್ಲ. ಹೊರ ಆವರಣ ಬೇರೆಯಾದರೂ, ಎಲ್ಲ ಮಕ್ಕಳ ಒಳ ಹೂರಣ ಒಂದೇ ಇರಬಹುದಾ...?

ಇಷ್ಟರಲ್ಲಿ ಮನಸ್ಸು ನಾಗಾಲೋಟದಿಂದ ಕಳೆದು ಹೋದ ಕಾಲವನ್ನು ಹೊಕ್ಕಿತು. An Englishman, even if he is alone, forms an orderly queue of one ಎಂಬ ಎಂದೋ ಓದಿದ್ದ ಸಾಲು ನೆನಪಿಗೆ ಬಂದು ನಕ್ಕೆ. ಇದೇನೂ ಹೊಗಳಿಕೆಯಾ, ತೆಗಳಿಕೆಯಾ ಎಂಬ ಜಿಜ್ಞಾಸೆಗೆ ಕ್ಷಣ ಕಾಲ ಬಲಿಯಾದೆ. ಇಂಗ್ಲೆಂಡಿನಲ್ಲಿ queue ಎಂಬುದು ಅಮೆರಿಕಾದಲ್ಲಿ ಲೈನ್ ಆಗುತ್ತದೆ. ಆ ದೇಶಗಳಲ್ಲಿ ಕ್ಯೂ ಕಡೆಗಣಿಸಿ,